ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ
Karnataka State Rural Development and Panchayat Raj University, Gadag

ರೈತ ಭವನ, ಜನರಲ್ ಕಾರ್ಯಪ್ಪ ವೃತ್ತ, ಗದಗ– 582 101

E-mail: ksrdpruconvocation@gmail.com Phone: 08372-230338, Fax: 08372-297343

No: RDPRU 11 EXM 2024 Date: 26-01-2024

## ಅಧಿಸೂಚನೆ

ವಿಷಯ: ವಿಶ್ವವಿದ್ಯಾಲಯದಲ್ಲಿ ಜರುಗುತ್ತಿರುವ ನಾಲ್ಕನೇ ಘಟಿಕೋತ್ಸವದಲ್ಲಿ ಪದವಿ ಪ್ರಧಾನ ಕೋರಿ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 26-01-2024

ಈ ಮೂಲಕ ತಿಳಿಸುವುದೇನೆಂದರೆ ನಾಲ್ಕನೇ ಘಟಿಕೋತ್ಸವವನ್ನು 06 ನೇ ಮಾರ್ಚ್ 2024 ರಂದು ಜರುಗಿಸಲು ಯೋಜಿಸಲಾಗಿದೆ. ಸದರಿ ಘಟಿಕೋತ್ಸವದಲ್ಲಿ 2022–23 ರಲ್ಲಿ ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು. (ಈ ಹಿಂದೆ ತೇರ್ಗಡೆ ಹೊಂದಿದ ಮತ್ತು ಅರ್ಜಿ ಸಲ್ಲಿಸದ ವಿದ್ಯಾರ್ಥಿಗಳು ಕೂಡ ಅರ್ಜಿಗಳನ್ನು ಸಲ್ಲಿಸಬಹುದು)

ಘಟಿಕೋತ್ಸವದ ಅರ್ಜಿ ನಮೂನೆಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲ ತಾಣ www.ksrdpru.ac.in ದಿಂದ ಪಡೆದುಕೊಳ್ಳಬಹುದು. ಪೂರ್ಣ ಭರ್ತಿ ಮಾಡಿದ ಅರ್ಜಿಯನ್ನು ಅನ್ವಯಿತ ಶುಲ್ಕದೊಂದಿಗೆ ಸಲ್ಲಿಸಬೇಕು.

**ಘಟಿಕೋತ್ಸವ ಶುಲ್ಕಗಳ ಮಾಹಿತಿ ಈ ಕೆಳಗಿನಂತಿದೆ:**

| ಕ್ರ. ಸಂ. | ವಿಧಾನ | ತೇರ್ಗಡೆಯಾದ ವರ್ಷಕ್ಕೆ ಅನುಸಾರ ಭರಿಸಬೇಕಾದ ಶುಲ್ಕ | | | | |
|---|---|---|---|---|---|---|
| | | 2022-23 | 2021-22 | 2020-21 | 2019-20 | 2018-19 |
| 1. | ಉಪಸ್ಥಿತಿ | 1500/- | 1700/- | 1900/- | 2100/- | 2300/- |
| 2. | ಅನುಪಸ್ಥಿತಿ | 1500/- + 200/- ಅಂಚೆ ಶುಲ್ಕ | 1900/- | 2100/- | 2300/- | 2500/- |

ಪೂರ್ಣ ಭರ್ತಿ ಮಾಡಿದ ಅರ್ಜಿಗಳು ಮತ್ತು ಶುಲ್ಕ ಭರಿಸಿದ ವಿವರಗಳ ರಶೀದಿಯನ್ನು ಕುಲಸಚಿವರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರಿಗೆ ಈ ಕೆಳಗೆ ನಿಗದಿಸಿದ ದಿನಾಂಕದೊಳಗೆ ತಲುಪಬೇಕು.

| ವಿವರಣೆ | ಶುಲ್ಕ ಸಂದಾಯಕ್ಕೆ ಕೊನೆಯ ದಿನಾಂಕ | ಪೂರ್ಣಗೊಳಿಸಿದ ಅರ್ಜಿ ವಿಶ್ವವಿದ್ಯಾಲಯ ತಲುಪಲು ಕೊನೆಯ ದಿನಾಂಕ |
|---|---|---|
| **ಯಾವುದೇ ದಂಡವಿಲ್ಲದೆ** | 08.02.2024 | 12.02.2024 |
| **200/– ರೂಪಾಯಿಗಳ ದಂಡದೊಂದಿಗೆ** | 12.02.2024 | 15.02.2024 |

ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಅಂಕಪಟ್ಟಿಯ ಪ್ರಕಾರ ತಮ್ಮ ಸರಿಯಾದ ಹೆಸರನ್ನು ಇಂಗ್ಲೀಷ ಮತ್ತು ಕನ್ನಡದಲ್ಲಿ ಕಡ್ಡಾಯವಾಗಿ ತುಂಬಬೇಕು. ಆನ್‌ಲೈನ್ ಶುಲ್ಕ ಭರಿಸಿದ ರಶೀದಿ/ಡಿ.ಡಿ/ಚಲನ್ ಮತ್ತು ಅರ್ಜಿಗೆ ಲಗತ್ತಿಸಿದ ಭಾವಚಿತ್ರದೊಂದಿಗೆ ಒಂದು ಹೆಚ್ಚುವರಿ ಪಾಸ್‌ಪೋರ್ಟ ಗಾತ್ರದ ಭಾವಚಿತ್ರವನ್ನು ಕಳುಹಿಸಬೇಕು. (ಲಕೋಟೆಯಲ್ಲಿ ಕಳುಹಿಸಿ / ಪಿನ್ ಬಳಸಬೇಡಿ)

ಯಾವುದೇ ಅಭ್ಯರ್ಥಿಯು ಪದವಿ ಪ್ರಮಾಣ ಪತ್ರವನ್ನು ಉಪಸ್ಥಿತಿಯಲ್ಲಿ ಪಡೆಯಲು ಇಚ್ಛಿಸಿದ್ದಲ್ಲಿ ಅರ್ಜಿಯಲ್ಲಿ ವಿಧಾನವನ್ನು "ಉಪಸ್ಥಿತಿ" ಎಂದು ನಮೂದಿಸಬೇಕು. ತಪ್ಪಿದ್ದಲ್ಲಿ ಸದರಿ ಅಭ್ಯರ್ಥಿಯ ಪದವಿ ಪ್ರಮಾಣ ಪತ್ರ ಪಡೆಯುವ ವಿಧಾನವನ್ನು "ಅನುಪಸ್ಥಿತಿ" ಎಂದು ಪರಿಗಣಿಸಲಾಗುವುದು.

ಉಪಸ್ಥಿತರಾಗಿ ಪದವಿ ಪ್ರಮಾಣ ಪತ್ರವನ್ನು ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು ಘಟಿಕೋತ್ಸವ ಸಮಾರಂಭದಂದು ಘಟಿಕೋತ್ಸವ ಸಮವಸ್ತ್ರವನ್ನು ಧರಿಸಿ ಉಪಸ್ಥಿತರಿರಬೇಕಾಗುತ್ತದೆ. ಸಮವಸ್ತ್ರ, ಸ್ಥಳ, ದಿನಾಂಕ ಮತ್ತು ಸಮಯವನ್ನು ತದನಂತರ ತಿಳಿಸಲಾಗುವುದು.

ಅನುಪಸ್ಥಿತಿಯಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ನೋಂದಣಿ ಮಾಡಿದ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಕಾರ್ಯಕ್ರಮವು ಮುಗಿದ ನಂತರ ತ್ವರಿತ ಅಂಚೆ (Speed Post) ಸೇವೆಯ ಮೂಲಕ ಪದವಿವಾರು ಅವರು ಅರ್ಜಿಯಲ್ಲಿ ನಮೂದಿಸಿದ ವಿಳಾಸಕ್ಕೆ ಪದವಿ ಪತ್ರವನ್ನು ಕಳುಹಿಸಲಾಗುವುದು. ಮುಂದುವರೆದು ವಿಶ್ವವಿದ್ಯಾಲಯವು ವಿತರಿಸಿದ ಪದವಿ ಪ್ರಮಾಣ ಪತ್ರವನ್ನು ಕಚೇರಿಯಿಂದ ಯಾವುದೇ ತಿದ್ದುಪಡಿಯಿದ್ದಲ್ಲಿ ಪ್ರಮಾಣ ಪತ್ರ ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಪ್ರಮಾಣ ಪತ್ರವನ್ನು ಅಗತ್ಯ ದಾಖಲೆಗಳೊಂದಿಗೆ ತಿದ್ದುಪಡಿಗಾಗಿ ಖುದ್ದಾಗಿ/ಅಂಚೆಯ ಮುಖಾಂತರ ಸಲ್ಲಿಸಲು ಸೂಚಿಸಿದೆ.

ವಿಶೇಷ ಸೂಚನೆ:

1. ಸಂದಾಯ ಮಾಡಿದ ಶುಲ್ಕವನ್ನು ಯಾವುದೇ ಕಾರಣಕ್ಕೆ ಮರಳಿ ನೀಡಲಾಗುವುದಿಲ್ಲ ಮತ್ತು ಮುಂದಿನ ಘಟಿಕೋತ್ಸವಕ್ಕೆ ಹೊಂದಾಣಿಕೆ ಮಾಡುವುದಿಲ್ಲ.
2. ಅಪೂರ್ಣ ಅಥವಾ ನಿಗದಿತ ಶುಲ್ಕ ಭರಿಸದ ಅರ್ಜಿಯನ್ನು ತಿರಸ್ಕರಿಸಲಾಗುವುದು.
3. ಅಂಚೆ ಇಲಾಖೆ ಅಥವಾ ಇತರೆ ತಾಂತ್ರಿಕ ವಿಳಂಬಗಳಿಗೆ ವಿಶ್ವವಿದ್ಯಾಲಯ ಜವಾಬ್ದಾರಿಯಲ್ಲ.
4. ಡಿ.ಡಿ ಯನ್ನು ಹಣಕಾಸು ಅಧಿಕಾರಿ, ಕ.ರಾ.ಗ್ರಾ.ಪಂ.ರಾ ವಿಶ್ವವಿದ್ಯಾಲಯ, ಗದಗ ಇವರ ಹೆಸರಿನಲ್ಲಿ ತೆಗೆಯತಕ್ಕದ್ದು ಅಥವಾ **ಉಳಿತಾಯ ಖಾತೆ ಸಂಖ್ಯೆ :31400100007777, Bank of Baroda, IFSC Code: BARB0GADAGX (ಐದನೇ ಶಬ್ದ ಸೊನ್ನೆ)** ಸದರಿ ಖಾತೆಗೆ ಜಮಾ ಮಾಡಬೇಕು.

ಕುಲಸಚಿವರು

ಪ್ರತಿ ಮಾಹಿತಿಗಾಗಿ:

1. ಹಣಕಾಸು ಅಧಿಕಾರಿಗಳು, ಕ.ರಾ.ಗ್ರಾ.ಪಂ.ರಾ ವಿಶ್ವವಿದ್ಯಾಲಯ, ಗದಗ
2. ಸಂಯೋಜಕರು, ಎಲ್ಲಾ ಕಾರ್ಯಕ್ರಮಗಳು, ಕ.ರಾ.ಗ್ರಾ.ಪಂ.ರಾ ವಿಶ್ವವಿದ್ಯಾಲಯ, ಗದಗ
3. ಆಪ್ತ ಸಹಾಯಕರು, ಕುಲಪತಿಗಳು/ಕುಲಸಚಿಬರು, ಕ.ರಾ.ಗ್ರಾ.ಪಂ.ರಾ ವಿಶ್ವವಿದ್ಯಾಲಯ, ಗದಗ
4. ಮಾಹಿತಿ ತಂತ್ರಜ್ಞಾನ ವಿಭಾಗ ಅಂತರ್ಜಾಲದಲ್ಲಿ ಭಿತ್ತರಿಸಲು
5. ಸೂಚನಾ ಫಲಕ